ದಿ.07-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆ** ಃ ಅರ್ಜಿದಾರರ ಪರ ಶ್ರೀ ಎಂ ಕೆ ವಕೀಲರಿಂದ

16. ಅರ್ಜಿದಾರರನ್ನು ಕೆಲಸದಿಂದ ತೆಗೆಯುವ ಪೂರ್ವದಲ್ಲಿ ಹುಬ್ಬಳಿಯ ಇ.ಟಿ. ನ್ಯಾಯಾಲಯದಲ್ಲಿ ಐಡಿ ನಂ.222/19 ಚಾಲನೆಯಲ್ಲಿತ್ತು ಎಂದು ನನಗೆ ಗೊತ್ತಿತ್ತು. ಆದ್ದರಿಂದ ಅರ್ಜಿದಾರರನ್ನು ಕೆಲಸದಿಂದ ತೆಗೆದಿರುವುದು ತಪ್ಪು ಎನ್ನುವುದು ಸರಿಯಲ್ಲ. ಈ ಪ್ರಕರಣ ಪ್ರಾರಂಭವಾದಾಗ ದಾವಣಗೆರೆಯ ಜಿಲ್ಲೆಯ ಕೆ ಪಿ ಟಿ ಸಿ ಎಲ್ ಸಂಸ್ಥೆಗೆ ಮತ್ತು ತ್ಯಾವಣಗಿ ಉಪ ಸಂಸ್ಥೆಗೆ ಮೇಲಾಧಿಕಾರಿ ಸುಪ್ರಿಂಟೆಂಡ್ ಇಂಜಿನಿಯರ್ ಎಂದರೆ ನಿಜ. ನಿಪಿ.28 ರಂತೆ 2018 ರಲ್ಲಿ ಅರ್ಜಿದಾರರಿಗೆ ಕೆಲಸದಿಂದ ತೆಗೆದಿರುವುದು ತಪ್ಪು ಅಂತಾ ಒಂದು ಅರ್ಜಿಯನ್ನು ರಾಜ್ಯ ಸಂಘಟನಾ ಕಾರ್ಯದರ್ಶಿ ಸಲ್ಲಿಸಿದ್ದರು ಎಂದರೆ ನಿಜ. ಸುಪ್ರಿಂಡೆಂಟ್ ಇಂಜಿಯರ್ ರವರು ನಿಪಿ.28 ಕ್ಕೆ ಉತ್ತರ ನೀಡಿರುವುದಿಲ್ಲ. ನಿಪಿ.29 ರ ಬಗ್ಗೆ ಮಾಹಿತಿ ನನಗೆ ಇರುತ್ತದೆ. ಅರ್ಜಿದಾರರು ನಿಪಿ.30 ರಿಂದ 32 ರಂತೆ ಎಕ್ಸಿಕ್ಯುಟಿವ್ ಇಂಜಿನಿಯರ್ ರವರಿಗೆ ಅರ್ಜಿಗಳನ್ನು ಸಲ್ಲಿಸಿದ್ದರು ಎಂದರೆ ನಿಜ. ಅರ್ಜಿದಾರರನ್ನು ಕೆಲಸದಿಂದ ತೆಗೆದು ಹಾಕಿರುವುದು ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ.

17. ಪಾಳಿ ಕೆಲಸಗಾರರಿಗೆ ನಿಯಂತ್ರಣ ನಮ್ಮ ಅಧಿಕಾರಿಯವರು ಇರುವುದರಿಂದ ಅಂತಹ ಕಾರ್ಮಿಕರು ನಮ್ಮ ಸಂಸ್ಥೆಯ ಕಾರ್ಮಿಕರಾಗಿರುತ್ತಾರೆ ಎಂದರೆ ಸುಳ್ಳು. ಅಂತಹ ಕಾರ್ಮಿಕರನ್ನು ಕಾನೂನು ಬಾಹಿರವಾಗಿ ಮತ್ತು ಅಕ್ರಮವಾಗಿ ಕೆಲಸದಿಂದ ತೆಗೆದುಹಾಕಿದ್ದೇವೆ ಎಂದರೆ ಸುಳ್ಳು. ಅರ್ಜಿದಾರರಂತಹ ಕಾರ್ಮಿಕರಿಗೆ ಯಾವ ರೀತಿ ಕೆಲಸ ಮಾಡಬೇಕು , ಮತ್ತು ನಿಯಂತ್ರಣ ಮಾಡಬೇಕು ಎಂದು ಎಂದಿಗೂ ಕಾಂಟ್ರಾಕ್ಟನಲ್ಲಿ ಅವರಿಗೆ ಹೇಳಿರುವುದಿಲ್ಲ ಎಂದರೆ ಸುಳ್ಳು. ಆ ಕೆಲಸವನ್ನು ಯಾವಾಗಲೂ ನಮ್ಮ ಅಧಿಕಾರಿಗಳೇ ಅರ್ಜಿದಾರರಿಗೆ ಮಾಡಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಹೇಳುತ್ತಾರೆ- ಅರ್ಜಿದಾರರು ಗುತ್ತಿಗೆದಾರರ ನಿರ್ದೇಶದ ಮೇರೆಗೆ ತಮ್ಮ ಕೆಲಸ ಮಾಡಿರುತ್ತಾರೆ.

18. ಆದ್ದರಿಂದ ಅರ್ಜಿದಾರರು ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ ಎಂದರೆ ಸುಳ್ಳು. ನಾವು ಕಾಂಟ್ರ್ಯಾಕ್ಟರ್ ಜೊತೆ ಶಾಮೀಲಾಗಿ ಅರ್ಜಿದಾರರನ್ನು ಕೆಲಸದಿಂದ ತೆಗೆದು ಹಾಕಿದ್ದೇವೆ ಎಂದರೆ ಸುಳ್ಳು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.